ಈಚೆಗೆ ನಮ್ಮಮನೆಯಲ್ಲೊಂದು ಸಮಾರಂಭವಿತ್ತು. ಅದು ನಮ್ಮ ಮಾವನವರ ಎಂಬತ್ತು ವರ್ಷದ ವರ್ಧಂತಿ. ಆ ವಯಸ್ಸಿನಲ್ಲೂ ಹರೆಯದ ಹುಡುಗನಂತೆ ಲವಲವಿಕೆಯಿಂದ ಓಡಾಡುತ್ತಾ ಶಿಸ್ತುಬದ್ಧ ಜೀವನ ನಡೆಸುತ್ತಿದ್ದ ಅವರ ಮೇಲೆ ನಮಗೆಲ್ಲಾ ಬಲು ಅಭಿಮಾನ. ಆ ಶುಭದಿವಸವನ್ನು ವಿಶೇಷ ರೀತಿಯಲ್ಲಿ ಆಚರಿಸಬೇಕೆಂದು ಎಲ್ಲರ ಆಸೆ. ಅದರ ಬಗ್ಗೆ ಚರ್ಚಿಸಲು ಮನೆಯವರೆಲ್ಲಾ ಹಾಲಿನಲ್ಲಿ ಸೇರಿದ್ದೆವು.

'ಈ ವಿಷಯ ಹೆಚ್ಚು ಪ್ರಚಾರ ಮಾಡ್ಡೆ ನಾವಿಷ್ಟು ಜನ ಮಾತ್ರ ಮನೆದೇವ್ರ ಗುಡೀಗೆ ಹೋಗಿ ಪೂಜೆ ಮಾಡ್ಸಿ ಬಂದುಬಿಡೋಣ' ಎಂದರು ಬರ್ತಡೇ ಬಾಯ್ ನಮ್ಮ ಮಾವ. ಇದನ್ನು ಕೂಡಲೇ ವಿಟೋ ಮಾಡಿದ್ದು ಅವರ ಮಗ ಅರ್ಥಾತ್ ನನ್ನ ಗಂಡ. 'ನಮ್ಮ ಮನೇ ದೇವ್ರ ಗುಡಿ ಇರೋದು ಕುಗ್ರಾಮದಲ್ಲಿ. ಅಲ್ಲಿಗೆ ನಮ್ಮ ಇಷ್ಟ ಮಿತ್ರ ಬಂಧುಬಾಂಧವರು ಯಾರೂ ಬರೋಲ್ಲ. ಇಲ್ಲೇ ಗ್ರ್ಯಾಂಡಾಗಿ ಮಾಡೋಣ. ಆಮೇಲೆ ನಾವಿಷ್ಟೇ ಜನ ಮನೆದೇವ್ರ ಗುಡೀಗೆ ಹೋಗಿ ಸೇವೆ ಸಲ್ಲಿಸಿ ಬರೋಣ.' ಮಿಕ್ಕೆಲ್ಲಾ ವಿಷಯಗಳಲ್ಲಿ ತಂದೆ ಜೊತೆ ಎಣ್ಣೆ ಸೀಗೇಕಾಯಿ ಸಂಬಂಧ ಹೊಂದಿದ್ದ ನನ್ನ ಮಗ ಇದೊಂದು ವಿಷಯದಲ್ಲಿ ತನ್ನ ಸಹಮತ ಸೂಚಿಸಿದ.

'ಹೌದಪ್ಪಾ. ಇಲ್ಲೇ ಯಾವ್ದಾದ್ರೂ ಪಂಚತಾರಾ ಹೋಟಲಿನಲ್ಲಿ ಪಾರ್ಟಿ ಇಟ್ಟುಕೊಳ್ಳೋಣ. ಬೀರ್ ಪಾರ್ಟಿ ಅಂತ ಮೊದ್ಲೇ ಪ್ರಚಾರ ಕೊಟ್ರೆ ಜನ ಮುಗಿಬಿದ್ದು ಪಾರ್ಟಿಗೆ ಬರ್ತಾರೆ.'

ನಮ್ಮತ್ತೆ ಮೊಮ್ಮಗನ ತಲೆಗೆ ಮೊಟಕಿದರು. 'ಹಾಕ್ತೀನಿ ನೋಡು. ಬೀರಂತೆ ಬೀರು. ಏನೂ ಬೇಡ. ಲಕ್ಷಣವಾಗಿ ಮನೇಲೇ ಆಚರಿಸಿ ಹೋಳಿಗೆ ಪಾಯಸದ ಊಟ ಹಾಕಿಸೋಣ. ಹೊರಗೆ ದೊಡ್ಡ ಚಪ್ಪರ ಹಾಕ್ಸಿ ಪುರೋಹಿತರಿಂದ ಹೋಮ ಹವನ ಮಾಡಿಸೋಣ. ಆಯುಷ್ಯ ಹೋಮ ಮಾಡ್ಸಿದ್ರೆ ಬಹಳ ಮಂಗಳಕರವಂತೆ.'

'ಯಾರಿಗೆ ಮಂಗಳಕರ? ಪುರೋಹಿತರಿಗಾ?' ಇದು ನನ್ನ ಮಗಳ ತಲೆಹರಟೆ ಪ್ರಶ್ನೆ.

'ಪುರೋಹಿತರಿಗೆ ಹೇಗೆ? ಅವ್ರಿಗೆ ನಾವು ಸಂಭಾವನೆ ಕೊಡೋಲ್ವೇ? ಅವರಿಗೆ ಹಣ ನಮಗೆ ಪುಣ್ಯ.'

'ಅದೆಲ್ಲಾ ಆ ಕಾಲಕ್ಕೇ ಹೋಯ್ತು. ಉಳುವವನೇ ಹೊಲದ ಒಡೆಯ ಅಂತ ಕೇಳಿಲ್ವೇ? ಅದೇ ಥರ ಸ್ವತಃ ಪೂಜೆ ಮಾಡೊವ್ನೇ ಅದರ ಪುಣ್ಯಕ್ಕೆ ಭಾಗಿ. ಬೇರೇವ್ರು ಅಲ್ಲ.' ಎಂದಳು ನನ್ನ ಪುರೋಗಾಮಿ ಮಗಳು.

ದುಡ್ಡೂ ಕಾಸು ಕೊಟ್ಟು ತೆಗೆದುಕೊಳ್ಳುವ ವಿಷಯದಲ್ಲಿ ನನ್ನ ಮಾವನವರು ಬಲು ಕಟ್ಟುನಿಟ್ಟು. ಪುರೋಹಿತರಿಗೇ ಪುಣ್ಯ ಅನ್ನೋದಾದ್ರೆ ನಾವ್ಯಾಕೆ ಹಣ ಖರ್ಚು ಮಾಡ್ಬೇಕು? ಹೋಮ ಹವನ ಏನೂ ಬೇಡ. ನಾವೇ ಭಾಗವಹಿಸುವಂತಹ ಪೂಜೆಯ ಬಗ್ಗೆ ಯೋಚಿಸಿ ಎಂದು ರೂಲಿಂಗ್ ಇತ್ತರು. ನಮ್ಮ ಮನೆಯ ಅಡುಗೆಯಾಕೆಯ ಬಗ್ಗೆ ಹೇಳೋದು ಮರ್ತಿದ್ದೆ. ಆಕೆ ಅನ್ನಪೂರ್ಣಮ್ಮ. ಬಲು ಅಧಿಕಪ್ರಸಂಗಿ. ನಮ್ಮಮನೆಯ ಆಂತರಿಕ ವಿಷಯಗಳಲ್ಲಿ ತಪ್ಪದೇ ತಲೆ ಹಾಕುತ್ತಿದ್ದರು. ನಮ್ಮತ್ತೆ ನೋಡುವಷ್ಟು ನೋಡಿ ಏನಾದರೂ ಬೈದರೆ ಒಂದೆರಡು ದಿನಗಳು ಮೌನವ್ರತ. ನಂತರ ಮತ್ತದೇ ಹಳೆಯ ರಾಗ. ಈಗ ನಮ್ಮ ಮೀಟಿಂಗ್ ನಡೆಯುತ್ತಿದ್ದಲ್ಲಿಗೆ ನುಗ್ಗಿ ಬಂದರು.

'ರಾಯರೆ, ನಾ ಹೇಳ್ತೀನಿ ಕೇಳಿ. ಹೋಮ ಹವನ ಏನೂ ಬೇಡಿ. ಎಲ್ಲರೂ ಕುಳಿತು ಸಾಮೂಹಿಕವಾಗಿ ವಿಷ್ಣು ಸಹಸ್ರನಾಮ ಪಾರಾಯಣ ಇಟ್ಕೊಳ್ಳಿ. ಎಲ್ಲರೂ ಪಾಲ್ಗೊಂಡಂತೂ ಆಯ್ತು. ಪುರೋಹಿತರಿಗೆ ಕೊಡೋ ನೂರಾರು ರೂಪಾಯಿ ದಕ್ಷಿಣೇನೂ ಮಿಗ್ತು.'